ಫೋನ್ ಮಾಡುವುದಕ್ಕೆ ಸಾಧ್ಯವೆ ? ದಯವಿಟ್ಟು ಪೂರ್ಣವಾಗಿ ಕೆಲಸಮಾಡದೆ ಇರತಕ್ಕಂಥ ಎಕ್ಸ್‌ರೆ ಮಿಷನ್‌ಗಳನ್ನು ತೆಗೆದು, ಬೇರೆ ಮಿಷನ್‌ಗಳನ್ನು ಹಾಕಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ—ಜನವರಿ ಮೂರನೆ ವಾರದಿಂದ ಎಕ್ಸ್‌ರೆ ಮಿಷನ್ ಕೆಲಸ ಮಾಡುತ್ತಿದೆ. ಒಂದು ಪಕ್ಷ ಕೆಟ್ಟು ಜೆನ್ನಾಗಿ ಕೆಲಸ ಮಾಡುತ್ತಿಲ್ಲ ಎನ್ನುವುದು ಕಂಡುಬಂದರೆ ಪರಿಶೀಲನೆ ಮಾಡಿ ರಿಪೇರಿ ಕೆಲಸವನ್ನು ಜಾಗ್ರತೆಯಾಗಿ ತೆಗೆದುಕೊಳ್ಳುತ್ತೇವೆ. ಸದ್ಯದಲ್ಲಿ ಯಾವ ತೊಂದರೆಯೂ ಇಲ್ಲವೆಂದು ತಿಳಿದಿರುತ್ತದೆ. ಮುಂದೆ ತೊಂದರೆ ಬಂದಾಗ ನೋಡೋಣ.

MATTER UNDER RULE 312

(i) re : acute shortage of water in villages in Madhugiri, Koratagere, Gubbi and Tumkur Taluks.

†ಶ್ರೀ ಜಿ.ಎಸ್. ಶಿವನಂಜಪ್ಪ (ಬೆಳ್ಳಾವಿ)—ಮಾನ್ಯ ಅಧ್ಯಕ್ಷರೆ ನಾನು ತುಮಕೂರು ಜಿಲ್ಲೆಯ ಮಧುಗಿರಿ, ಕೊರಟಗೆರೆ, ಗುಬ್ಬಿ, ತುಮಕೂರು ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ಪಡುತ್ತಿರುವ ಬವಣೆಯ ಬಗ್ಗೆ ಗಮನ ಸೆಳೆಯುವ ಸೂಚನೆಯ ಮುಖಾಂತರ ನಿರ್ದಿಷ್ಟವಾಗಿ ಬರೆದು ಕಳುಹಿಸಿದ್ದೆ. ನಾನು ಬರೆದು ಕಳುಹಿಸಿರತಕ್ಕಂಥ ಹಳ್ಳಿಗಳಲ್ಲಿ ಸುಮಾರು ಒಂದು ವರ್ಷದಿಂದ ಸರ್ಕಾರವನ್ನು ಕೇಳುತ್ತಲೇ ಇದ್ದೇನೆ. ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಕೊರಹಳ್ಳಿಗೆ ಸೇರಿದಂಥ ೫೩ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಚನ್ನರಾಯನದುರ್ಗಕ್ಕೆ ಸೇರಿದಂತೆ ೧೪ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ದೊಡ್ಡೇರಿ ಹಳ್ಳಿಗೆ ಸೇರಿದಂತೆ ೧೮ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ತೊಂದರೆ ಪಡುತ್ತಿರುತ್ತಾರೆ. ಅದರಲ್ಲೂ ಹರಿಜನರು ವಾಸಮಾಡತಕ್ಕಂಥ ಸ್ಥಳಗಳಲ್ಲಿ, ಹಿಂದುಳಿದವರು ಇರತಕ್ಕಂಥ ಸ್ಥಳಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲದೆ ಜನರು ಬಹಳವಾಗಿ ತೊಂದರೆಯನ್ನು ಅನುಭವಿಸುತ್ತಿರುವ ವಿಷಯವನ್ನು ಸುಮಾರು ಒಂದು ವರ್ಷದಿಂದ ಸಂಬಂಧಪಟ್ಟ ಚೀಫ್ ಇಂಜಿನಿಯರ್‌ರವರಿಗೂ ಮತ್ತು ಸಂಬಂಧಪಟ್ಟ ಬಿ.ಡಿ.ಓ.ರವರಿಗೂ ಏನಿಲ್ಲವೆಂದರೂ ೫೦ ಬಾರಿಯಾದರೂ ಕೇಳಿಕೊಂಡಿರುತ್ತೇವೆ. ಅವರು ಈವತ್ತಿನವರೆಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಈವತ್ತಿನ ದಿವಸ ಪ್ರಶ್ನೆಯನ್ನು ಈ ಸದನದಲ್ಲಿ ಕೇಳುತ್ತಿರುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಹಾಜರಿಲ್ಲವೆಂದು ಕಾಣುತ್ತದೆ. ಉತ್ತರವನ್ನು ಯಾರು ಕೊಡುತ್ತಾರೋ ನನಗಂತೂ ತಿಳಿಯುತ್ತಿಲ್ಲ. ಸ್ವಾತಂತ್ರ್ಯ ಬಂದು ೩೦ ವರ್ಷಗಳಾದರೂ ಹರಿಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಲ್ಲವೆಂದರೆ ಇದು ಒಂದು ವಿಷಾದ ಪಡತಕ್ಕಂಥ ಸಂಗತಿಯಾಗಿರುತ್ತದೆ, ಪಂಪ್ ಸೆಟ್‌ಗಳನ್ನು ಇಟ್ಟುಕೊಂಡಿರತಕ್ಕಂಥವರು ನೀರನ್ನು ಕೊಡುವುದಿಲ್ಲ. ಜನರು ಕುಡಿಯುವ ನೀರಿಗಾಗಿ ಆಹಾಕಾರಪಡುತ್ತಿದ್ದಾರೆ. ಆದ್ದರಿಂದ ಕುಡಿಯುವ ನೀರಿನ ವ್ಯವಸ್ಥೆಯನ್ನು ಆದಷ್ಟು ಜಾಗ್ರತೆ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಅನೇಕ ಪತ್ರಗಳನ್ನೂ ಬರೆದಿದ್ದೇನೆ ಮತ್ತು ಅಧಿಕಾರಿಗಳಿಗೂ ತಿಳಿಸಿದ್ದೇನೆ. ನಾನು ಪತ್ರ ಬರೆದರೆ ಉತ್ತರ ಕೊಡತಕ್ಕ ಸೌಜನ್ಯವೂ ಸರ್ಕಾರಕ್ಕಿಲ್ಲ. ಅಲ್ಲಿ ಜನ ಗಂಂಪು ಕಟ್ಟಿಕೊಂಡು ನಮ್ಮ ಹತ್ತಿರ ಗಲಾಟೆ ಮಾಡುವುದಕ್ಕೆ ಬರುತ್ತಿದ್ದಾರೆ. ಈ ಸ್ಥಿತಿಯಲ್ಲಿ ನಾವೇನು ಮಾಡಬೇಕು ? ಸ್ವಾಮಿ, ನನ್ನ ಪ್ರಶ್ನೆಗಳಿಗೆ ಯಾರು ಉತ್ತರ ಕೊಡುತ್ತಾರೋ ಗೊತ್ತಿಲ್ಲ, ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿಲ್ಲ.

೧೦-೦೦ ಎ.ಎಂ.

ಅಧ್ಯಕ್ಷರು—ಯಾರು ಉತ್ತರ ಕೊಡುತ್ತಾರೋ ನನಗೂ ಗೊತ್ತಾಗುತ್ತಿಲ್ಲ, ಇವರು ಏತಕ್ಕೆ ಹೀಗೆ ಮಾಡುತ್ತಾರೋ ನನಗೆ ಒಂದೂ ಅರ್ಥವಾಗಂತ್ತಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ.—ಭಗವಂತನೇ ಬರಬೇಕು.

ಅಧ್ಯಕ್ಷರು.— ಇದಕ್ಕಿಂತ ಹೆಚ್ಚಿನ ಕೆಲಸ ಮಾನ್ಯ ಮಂತ್ರಿಗಳಿಗೆ ಏನು ಇರುತ್ತದೋ ಗೊತ್ತಾಗುವುದಿಲ್ಲ.

ಶ್ರೀ ಎಂ. ಸಿ. ಬಸಪ್ಪ— ಅವರಿಗೆ ಯಾವ ಖಾತೆಗೆ ಸೇರಿದ ಪ್ರಶ್ನೆ ಎಂಬುದು ಗೊತ್ತಿಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು—ಅವರಿಗೆಲ್ಲಾ ಅಜೆಂಡಾ ಹೋಗುತ್ತದೆ. ಸಂಬಂಧಪಟ್ಟ ಮಂತ್ರಿಗಳು ಉತ್ತರದೊಡನೆ ಸಿದ್ದರಾಗಿ ಬಂದು ಕುಳಿತುಕೊಳ್ಳುವುದಕ್ಕಾಗುವುದಿಲ್ಲವೇ ? ಈ ರೀತಿ ಮಾಡಿ ಸಮಸ್ಯೆಯನ್ನು ಇಕ್ಕಟ್ಟಿಗೆ ಸಿಕ್ಕಿಹಾಕಿಸುತ್ತಿದ್ದಾರೆ.

SRI S.R. BOMMAI.—Sir, the concerned Minister is so absent minded. Even while he is present in the house he will have to be called to answer.

ಒಬ್ಬ ಸದಸ್ಯರು—ಅವರು ಊರಿನಲ್ಲಿದ್ದಾರೋ ಇಲ್ಲವೋ ಗೊತ್ತಿಲ್ಲ.

ಅಧ್ಯಕ್ಷರು—ಇದ್ದಾರೆ. ಈಗ ಸಭೆಗೆ ಬಂದಿದ್ದರು.

(ಆ ಸಮಯದಲ್ಲಿ ಸಂಬಂಧಪಟ್ಟ ಸಚಿವರಾದ ಕೆ. ಪ್ರಭಾಕರ್ ಅವರು ಸಭೆಗೆ ಆಗಮಿಸಿದರು)

ಶ್ರೀ ಜಿ.ಎಸ್. ಶಿವನಂಜಪ್ಪ—ಮಾನ್ಯ ಮಂತ್ರಿಗಳು ಸಭೆಗೆ ಬಂದಿದ್ದಕ್ಕಾಗಿ ನನ್ನ ಧನ್ಯವಾದಗಳನ್ನು ಅರ್ಪಿಸಿ ವಿಷಯವನ್ನು ಮತ್ತೆ ಪ್ರಸ್ತಾಪ ಮಾಡುತ್ತೇನೆ. ತುಮಕೂರು ಜಿಲ್ಲೆಯ ಕೋರ, ಬೆಳ್ಳಾವೆ, ಕೊರಟಗೆರೆ ತಾಲ್ಲೂಕು, ಚನ್ನರಾಯನದುರ್ಗ, ಚೇಳೂರು ಹೋಬಳಿ, ಮಧುಗಿರಿ ತಾಲೂಕು ದೊಡ್ಡೇರಿ ಮುಂತಾದ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲವೆಂದು ಒಂದು ವರ್ಷದಿಂದ ಹೇಳುತ್ತಿದ್ದೇವೆ. ಆದರೂ ಏನೂ ಪ್ರಯೋಜನವಾಗಿಲ್ಲ. ಬೆಳಗಾರ–ಇದು ಮಧುಗಿರಿ ಮೈನ್ ರೋಡಿನಲ್ಲಿ ಸಿಗುತ್ತದೆ.

ಅಧ್ಯಕ್ಷರು—ತಾವು ಉದ್ದವಾದ ಭಾಷಣವನ್ನು ಮಾಡುವುದಕ್ಕೆ ಹೋಗಬೇಡಿ.

ಶ್ರೀ ಜಿ.ಎಸ್. ಶಿವನಂಜಪ್ಪ—ಹರಿಜನರ ಕಾಲೋನಿಗಳಲ್ಲಿ ನೀರು ಇಲ್ಲ ಮತ್ತು ದೊಡ್ಡೇರಿ ಹೋಬಳಿಯಲ್ಲಿ ಕ್ಷಾಮ ಬಂದು, ಮಳೆ ಆಗದೇ ಜನ ಕುಡಿಯುವ ನೀರಿಗೆ ಊರಿಂದ ಊರಿಗೆ ಅಲೆಯುತ್ತಿದ್ದಾರೆ. ಪಂಪ್‌ಸೆಟ್ ಇರುವ ಕಡೆ ಹೋದರೆ ಅಲ್ಲಿ ನೀರಿಗೆ ಸಗಣಿ ಕದರುತ್ತಿರುವುದರಿಂದ ಅಲ್ಲೂ ಕುಡಿಯುವ ನೀರು ಸಿಗುತ್ತಿಲ್ಲ. ಕುಡಿಯುವ ನೀರಿಗೆ ಅಲ್ಲೆಲ್ಲಾ ಬಹಳ ತೊಂದರೆಯಾಗಿದೆ. ಪಿ.ಹೆಚ್.ಇ. ಮುಖ್ಯ ಇಂಜಿನಿಯರ್ ಅವರಿಗೆ ಎಗ್ಸಿಕ್ಯುಟೀವ್ ಇಂಜಿನಿಯರ್ ಅವರಿಗೆ ಮತ್ತು ಡೆಪ್ಯುಟಿ ಕಮಿಷನರ್ ಅವರಿಗೆ ೨೦–೩೦ ಸಾರಿ ಹೇಳಿದ್ದೇನೆ. ಅಲ್ಲಿ ಜನರಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಕುಡಿಯುವ ನೀರಿನ ವ್ಯವಸ್ಥೆಯನ್ನು ತಕ್ಷಣ ಮಾಡಿಕೊಡುವುದಕ್ಕೆ ಆಶ್ವಾಸನೆ ಕೊಡುತ್ತಾರೆಯೇ ಎಂದು ಕೇಳುತ್ತಿದ್ದೇನೆ.

†ಶ್ರೀ ಕೆ. ಪ್ರಭಾಕರ್—ಬಹಳ ದಿನಗಳಿಂದ ನೀರಿನ ತೊಂದರೆ ಇದೆ ಎಂಬುದನ್ನು ಸರ್ಕಾರದ ಗಮನಕ್ಕೆ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿರುವುದಾಗಿ ಮಾನ್ಯ ಸದಸ್ಯರು ಹೇಳಿದರು. ಇಂಥ ಸಂದರ್ಭ ಬಂದಾಗಲೆಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಆದೇಶ ಕೊಟ್ಟು ವ್ಯವಸ್ಥೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಇವತ್ತು ಅನೇಕ ಕಡೆ ಕುಡಿಯುವ ನೀರಿನ ತೊಂದರೆ ಇದೆ ಎಂಬ ಮಾತನ್ನು ಹೇಳಿದ್ದಾರೆ. ನಾನು ಕೂಡಲೇ ಸೂಚನೆ ಕೊಟ್ಟು ತೊಂದರೆನಿವಾರಣೆಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಕುಡಿಯುವ ನೀರಿಗೆ ವ್ಯವಸ್ಥೆ ಮಾಡಿಸಿಕೊಡುತ್ತೇನೆ ಎಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ವೈ. ರಾಮಕೃಷ್ಣ — ಅಂದರೆ ಮಾನ್ಯ ಸದಸ್ಯರು ಹೇಳಿದ್ದೆಲ್ಲಾ ನಿಜ ಎಂದು ತಾವು ಒಪ್ಪುತ್ತೀರಾ ?

ಶ್ರೀ ಕೆ. ಪ್ರಭಾಕರ್—ಎಲ್ಲಾ ನಿಜ ಆಲ್ಲ. ಕೊಂಚ ಭಾಗ ನಿಜ.

ಶ್ರೀ ಜಿ.ಎಸ್. ಶಿವನಂಜಪ್ಪ—ದೊಡ್ಡೇರಿ ಹೋಬಳಿಯಲ್ಲಿ ಕ್ಷಾಮ ಬಂದಿದೆ. ಆದ್ದರಿಂದ ಅಲ್ಲಿಗೆ ಎಷ್ಟು ದಿವಸದಲ್ಲಿ ಕುಡಿಯುವ ನೀರಿಗೆ ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಡಿ. ದೇವರಾಜ ಅರಸ್—ಅಲ್ಲಿ ಬೋರ್‌ವೆಲ್ಸ್ ಒಂದೂ ಹಾಕಿಲ್ಲವೇ ? ಅಥವಾ ಹಾಕಿ ಫೈಲ್ಯೂರ್ ಆಗಿದೆಯೋ ;

ಶ್ರೀ ಜಿ.ಎಸ್. ಶಿವನಂಜಪ್ಪ—ಹಾಕಿಲ್ಲ.

ಶ್ರೀ ಡಿ. ದೇವರಾಜ ಅರಸ್—ನಿಮಗೆ ಸರಿಯಾಗಿ ಗೊತ್ತಿದ್ದರೆ ಹೇಳಿ.

ಶ್ರೀ ಜಿ.ಎಸ್. ಶಿವನಂಜಪ್ಪ—ಕೆಲವು ಹಳ್ಳಿಗಳಿಗೆ ಬೋರ್‌ವೆಲ್ ಹಾಕಿಲ್ಲ.

SRI D. DEVARAJ URS—I will see that borewells are put in the villages where there is scarcity of drinking water.

(*ii*) *re : release of prisoners under Judicial Custody as per directions of the S. C. to the Govt. of Karnataka*

ಶ್ರೀ ಎಂ. ಚಂದ್ರಶೇಖರ್ :—ಸ್ವಾಮಿ, ಅಂಡರ್‌ಟ್ರಯಲ್ ಪ್ರಿಸನರ್ಸ್ ವಿಷಯವಾಗಿ ರೂಲ್ 370ರ ಪ್ರಕಾರ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ.

SRI A. B. JAKANUR (Minister of State for Regulated Markets) :—Sir, I would like to make the following statement :—

There are 2511 undertrials in various Jails in our State as on 15.2.79. In so far as this Government is concerned, no directions have been received from the Supreme Court of India to take action to release all the undertrial prisoners in the State who are kept under Judicial custody for many months without trial and conviction. However, notices have been received in writ Petitions filed by two undertrial prisoners in the Supreme Court of India against their confinement in the Jail. They are 1) U.T No. 8093 Shri Sreedhara Rao and 2) U. T. No. 7437 Shri Shami Uliarit Ullah both charged u/s 302 of IPC in C. R. No. 120/75. These two prisoners were remanded to Judicial custody at the Central Prison, Bangalore on 20th November 1975 by the Chief Jndicial Magistrate Bangalore, This case is pending in Sessions Court since 6th January 1976. Actionhas already been taken to file counter affidavits in these cases before the Supreme Court. There are no undertrials in this State who are kept in the jails without being produced before the Courts. Instructions have been issued to the Inspector General of Police to take pursuant action in all cases involving undertrial prisoners to see that their cases are expedited.

The undertrial prisoners are confined in the jails of the State on warrants issued from the Courts of Magistrates or Sessions Judges and are released only on the specific orders of the Courts. The jail authorities cannot take any unilateral action to release the prisoners unless the Courts concerned order for their release.

ಶ್ರೀ ಎಂ. ಚಂದ್ರಶೇಖರ್ :—ದಿನಾಂಕ ೫ನೇ ಮಾರ್ಚ್ ೧೯೭೯ ರಲ್ಲಿ ಬಿಹಾರ ರಾಜ್ಯದ ಒಂದು ಕೇಸನ್ನು ಇತ್ಯರ್ಥ ಮಾಡುವಾಗ ಆದರಲ್ಲಿ ಕರ್ನಾಟಕ ರಾಜ್ಯ ಜಮ್ಮು ಕಾಶ್ಮೀರ ಮತ್ತು ಉತ್ತರ ಪ್ರದೇಶ ಎಂದು ಸೇರಿಸಿ ಕರ್ನಾಟಕ ರಾಜ್ಯಕ್ಕೂ ಅಫಿಡವಿಟ್ ಫೈಲ್ ಮಾಡುವ ರೀತಿಯಲ್ಲಿ ಆದೇಶ ನೀಡಲಾಗಿದೆ ಯೆಂದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಬಂದಿದೆ. ನಮ್ಮ ರಾಜ್ಯದಲ್ಲಿರತಕ್ಕ ಅಂಡರ್‌ಟ್ರಯಲ್ಸ್‌ನಲ್ಲಿ